# ಹೊಸ ಸಚಿವರಿಗೆ ಖಾತೆ ಕುತೂಹಲ

## ಇಂದು ಸಂಜೆಯೊಳಗೆ ಹಂಚಿಕೆ ಎಂದಿರುವ ಸಿಎಂ

### ಹೈಕಮಾಂಡ್ ಜತೆ ಚರ್ಚೆಗೆ ನಿರ್ಧರಿಸಿದರೆ ಹಂಚಿಕೆ ವಿಳಂಬ ಸಾಧ್ಯತೆ

### ಇಂದು ಆಪ್ತರ ಜತೆ ಸಭೆ, ಇತ್ಯರ್ಥವಾದರೆ ಕೂಡಲೇ ಹಂಚಿಕೆ ಸಂಭವ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರೇ ಘೋಷಿಸಿದ್ದಂತೆ ಶನಿ ವಾರ ಸಂಜೆಯೊಳಗಾಗಿ ನೂತನ ಸಚಿವ ರಿಗೆ ಖಾತೆಗಳ ಹಂಚಿಕೆಯಾಗುತ್ತದೆಯೇ ಎಂಬುದು ಕುತೂಹಲ ಮೂಡಿಸಿದೆ.



ಶನಿವಾರ ದೆಹಲಿ ವಿಧಾನಸಭಾ ಚುನಾವಣೆಯ ಮತದಾನ ನಡೆಯಲಿದ್ದು, ಭಾನುವಾರದಿಂದ ಬಿಜೆಪಿ ರಾಷ್ಟ್ರೀಯ ನಾಯಕರು ತುಸು ನಿರಾಳರಾಗಬಹುದು. ವರಿಷ್ಠರ ಜೊತೆ ಚರ್ಚಿಸಿಯೇ ಖಾತೆಗಳನ್ನು ಹಂಚಿಕೆ ಮಾಡಲು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನಿರ್ಧರಿಸಿದಲ್ಲಿ ದೆಹಲಿಗೆ ಸೋಮವಾರದ ನಂತರ ತೆರಳುವ ಸಾಧ್ಯತೆಯನ್ನೂ ಅಲ್ಲಗಳೆಯುವಂತಿಲ್ಲ.

ಮುಖ್ಯಮಂತ್ರಿಗಳ ಆಪ್ತರ ಪ್ರಕಾರ, ಯಡಿಯೂರಪ್ಪ ಅವರು ದೆಹಲಿಗೆ ಹೋಗಬೇಕಾದ ಅಗತ್ಯವೂ ಇಲ್ಲ. ದೂರವಾಣಿ ಮೂಲಕವೇ ವರಿಷ್ಠರ ಜೊತೆ ಮಾತನಾಡಿ ಖಾತೆಗಳ ಹಂಚಿಕೆ ಸಂಬಂಧ ಸಲಹೆ-ಸೂಚನೆಗಳನ್ನು ಪಡೆಯಬಹುದು ಎನ್ನಲಾಗಿದೆ.

ಈ ನಡುವೆ, ಯಡಿಯೂರಪ್ಪ ಅವರಿಗೆ ಶನಿವಾರ ಮತ್ತು ಭಾನುವಾರ ವಿವಿಧ ಜಿಲ್ಲೆಗಳ ಪ್ರವಾಸ ಕಾರ್ಯಕ್ರಮ ನಿಗದಿಯಾಗಿದೆ. ಭಾನುವಾರ ತಡರಾತ್ರಿ ಬೆಂಗಳೂರಿಗೆ ವಾಪಸಾಗಲಿದ್ದಾರೆ. ಒಂದು ವೇಳೆ ದೆಹಲಿಗೆ ಹೋಗುವುದು ಅನಿವಾರ್ಯವಾದಲ್ಲಿ ಸೋಮವಾರದ ನಂತರ ಹೋಗಬಹುದು ಎಂದು ಮೂಲಗಳು ತಿಳಿಸಿವೆ.

ಇದೇ ವೇಳೆ ಯಡಿಯೂರಪ್ಪ ಅವರ ಪುತ್ರ ವಿಜಯೇಂದ್ರ ಅವರು ಗುರುವಾರ ಸಂಪುಟ ವಿಸ್ತರಣೆ ಬೆನ್ನಲ್ಲೇ ದೆಹಲಿಗೆ ತೆರಳಿ ಶುಕ್ರವಾರ ಮಧ್ಯಾಹ್ನ ವಾಪಸಾಗಿದ್ದರು. ಖಾತೆಗಳ ಹಂಚಿಕೆ ಸಂಬಂಧ ಪಕ್ಷದ ವರಿಷ್ಠರ ಜೊತೆ ಮಾತುಕತೆ ನಡೆಸಲು ತಂದೆಯ ಪರವಾಗಿ ಹೋಗಿದ್ದಾರೆ ಎಂಬ ಮಾತುಗಳು ಕೇಳಿಬಂದಿವೆ.

» 14

**ಹೊಸ ಸಚಿವರ ಸಂಭಾವ್ಯ ಖಾತೆಗಳು**

1. **ಎಸ್.ಟಿ. ಸೋಮಶೇಖರ್:** ಸಹಕಾರ
2. **ರಮೇಶ್ ಜಾರಕಿಹೊಳಿ:** ಜಲಸಂಪನ್ಮೂಲ ಅಥವಾ ನಗರಾಭಿವೃದ್ಧಿ
3. **ಆನಂದ ಸಿಂಗ್:** ಆಹಾರ ಮತ್ತು ನಾಗರಿಕ ಪೂರೈಕೆ
4. **ಡಾ. ಕೆ. ಸುಧಾಕರ್:** ಇಂಧನ ಅಥವಾ ವೈದ್ಯಕೀಯ ಶಿಕ್ಷಣ
5. **ಬೈರತಿ ಬಸವರಾಜು:** ಪೌರಾಡಳಿತ ಅಥವಾ ನಗರಾಭಿವೃದ್ಧಿ
6. **ಶಿವರಾಂ ಹೆಬ್ಬಾರ್:** ತೋಟಗಾರಿಕೆ
7. **ಬಿ.ಸಿ. ಪಾಟೀಲ್:** ಕೃಷಿ ಅಥವಾ ತೋಟಗಾರಿಕೆ
8. **ಕೆ. ಗೋಪಾಲಯ್ಯ:** ಕಾರ್ಮಿಕ ಅಥವಾ ಮೂಲಸೌಕರ್ಯ
9. **ನಾರಾಯಣಗೌಡ:** ಸಣ್ಣ ನೀರಾವರಿ ಅಥವಾ ರೇಷ್ಮೆ
10. **ಶ್ರೀಮಂತ ಪಾಟೀಲ್:** ಸಕ್ಕರೆ ಅಥವಾ ಜವಳಿ

# ನೀರಾವರಿಗೆ ರಮೇಶ್ ಪಟ್ಟು

## ಬಿಎಸ್‌ವೈ ಭೇಟಿ ಮಾಡಿ ಕುಮಟಳ್ಳಿ ಪರವೂ ಬ್ಯಾಟಿಂಗ್



• **ಕನ್ನಡಪ್ರಭ ವಾರ್ತೆ** ಬೆಂಗಳೂರು

ತಮಗೆ ಜಲಸಂಪನ್ಮೂಲ ಖಾತೆ ನೀಡುವ ಬಗ್ಗೆ ಇದುವರೆಗೆ ಸ್ಪಷ್ಟ ಭರವಸೆ ನೀಡದಿರುವ ಕುರಿತು ಮತ್ತು ತಮ್ಮ ಪರಮಾಪ್ತ ಶಾಸಕ ಮಹೇಶ್ ಕುಮಟಳ್ಳಿ ಅವರಿಗೆ ಸಚಿವ ಸ್ಥಾನ ನೀಡದಿರುವ ಬಗ್ಗೆ ನೂತನ ಸಚಿವ ರಮೇಶ್ ಜಾರಕಿಹೊಳಿ ಅವರ ಮುನಿಸು ಮುಂದುವರೆದಿದೆ. ಸಂಪುಟ ವಿಸ್ತರಣೆಗೆ ದಿನಾಂಕ ನಿಗದಿಯಾದ ದಿನದಿಂದಲೂ ಯಾರೊಂದಿಗೂ ಹೆಚ್ಚು ಮಾತನಾಡದೆ ಮೌನಕ್ಕೆ ಜಾರಿರುವ ರಮೇಶ್ ಅವರು ಶುಕ್ರವಾರ ಸಂಜೆ ಯಡಿಯೂರಪ್ಪ ನಿವಾಸಕ್ಕೆ ಭೇಟಿ ನೀಡಿದರು. ಅವರೊಂದಿಗೆ ಶಾಸಕ ಮಹೇಶ್ ಕುಮಟಳ್ಳಿ ಅವರೂ ಇದ್ದರು. ಮುಖ್ಯಮಂತ್ರಿಗಳ ಜೊತೆ ಮಾತುಕತೆ ನಂತರವೂ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡದೆ ತೆರಳಿದ ರಮೇಶ್ ಜಾರಕಿಹೊಳಿ ಅವರ ಮುಖದಲ್ಲಿ ಗಂಭೀರತೆಯೇ ಕಂಡು ಬಂತು.

» 14